# ಹೊನ್ನ ಗುಣದ ಹೊನ್ನಂಬರಿ



**ಹೊನ್ನಾವರಿಕೆ, ಹೊನ್ನಾವರಿ, ತಂಗಡಿ, ಆವರಿಕೆ, ಹೊನ್ನಂಬರಕಿ ಹೀಗೆ ಹಲವು ಹೆಸರಿನಿಂದ ಕರೆಸಿಕೊಳ್ಳುವ ಈ ಹಳದಿ ಹೂವು, ಜನರ ಧಾರ್ಮಿಕ ನಂಬಿಕೆಗಳಲ್ಲಿ, ಜಾನಪದ ಹಾಗೂ ಪುರಾಣಗಳಲ್ಲಿ ಹಾಸುಹೊಕ್ಕಾಗಿದೆ.**

**■ ಸಿದ್ದು ಸತ್ಯಣ್ಣವರ**



ದೀಪಾವಳಿ ಹಬ್ಬಕ್ಕೆ ಹಳ್ಳಿಗರಿಗೆ ಚೆಂಡು ಹೂ, ತೆಂಗಿನ ಗರಿ, ಬಾಳೆ ಗರಿಗಳು ಎಷ್ಟು ಮುಖ್ಯವೋ, ಹೊನ್ನಂಬರಿ ಹೂಗಳು ಸಹ ಅಷ್ಟೇ ಅಗತ್ಯ. ನೂಲಹುಣ್ಣಿಮೆ ಹಾಗೂ ಗೌರಿ ಹುಣ್ಣಿಮೆಗಳಲ್ಲಿ, ಸಕ್ಕರೆ ಗೊಂಬೆಗಳ ಗುಂಪನ್ನು ತಂದು ತಟ್ಟೆಯಲ್ಲಿ ಅಲಂಕರಿಸಿ, ಜನಪದ ಹಾಡು ಹಾಡುತ್ತಾ ಪೂಜಿಸುವಾಗ ಹೊನ್ನಂಬರಿ ಹೂವಿಗೆ ಅಗ್ರಸ್ಥಾನ.

ಎರಿ ಹಾಗೂ ಮಸಾರಿ ಹೊಲದ ಕುರುಚಲು ಅರಣ್ಯ, ಹೊಲದ ಬದು ಬಯಲುಗಳಲ್ಲಿ ಸ್ವಾಭಾವಿಕವಾಗಿ ದಟ್ಟವಾಗಿ ಬೆಳೆಯುವ ಹೊನ್ನಂಬರಿ ಗಿಡಗಳನ್ನು ಹೊನ್ನಾವರಿಕೆ, ಹೊನ್ನಾವರಿ, ತಂಗಡಿ, ಆವರಿಕೆ, ಹೊನ್ನಂಬರಕಿ ಎಂದೆಲ್ಲ ಕರೆಯುವುದುಂಟು. ಗುಂಪಾಗಿ ಅರಳಿದ ಹೊನ್ನಂಬರಿಯ ಹಳದಿ ಬಣ್ಣದ ಹೂಗಳು ಗಾಳಿಗೆ ಮುಲುಕಾಡುವ ಸೊಗಸು ಕಣ್ಣಿಗೆ ಹಿತ.

'ಕ್ಯಾಶಿಯಾ ಅರಿಕ್ಯುಲಾಟಾ' ಇದರ ವೈಜ್ಞಾನಿಕ ಹೆಸರು. ಉತ್ತರ ಕರ್ನಾಟಕ ಭಾಗದಲ್ಲಿ ಬಹು ಸಾಂಪ್ರದಾಯಿಕವಾಗಿ ಮಹಿಳೆಯರು ಆಚರಿಸುವ ಗೌರಿ ಹುಣ್ಣಿಮೆ ಹಾಗೂ ನೂಲ ಹುಣ್ಣಿಮೆಗಳ ವಿಶಿಷ್ಟ ಜನಪದ ಆಚರಣೆಯಲ್ಲಿ ಹೊನ್ನಂಬರಿ ಹೂ ಹಾಗೂ ಸಕ್ಕರೆ ಗೊಂಬೆಗಳಿಲ್ಲದೆ ಆರತಿ ಬೆಳಗುವುದಿಲ್ಲ. ಬಹುತೇಕ ಕಡೆ ರೈತರು, ಕುರಿಗಾಹಿಗಳು, ಕಾಡುಗೊಲ್ಲರ ದೀಪಾವಳಿಯ ಹಟ್ಟಿಹಬ್ಬದ ದೇವರ ಆರಾಧನೆ ವೇಳೆ ಸಗಣಿಯಿಂದ ಮಾಡಿದ, ಪಾಂಡವರು ಎಂದು ಕರೆಯಲಾಗುವ ಐದು ಗುರ್ಜಿಗಳಿಗೆ ಸಿಂಗರಿಸಲು ಹೊನ್ನಂಬರಿ ಹೂಗಳೇ ಆಗಬೇಕೆಂಬುದು ಬಹು ಹಿಂದಿನಿಂದ ಕಡ್ಡಾಯವಾಗಿ ಬೇರೂರಿರುವ ನಂಬಿಕೆ. ಜನರ ಧಾರ್ಮಿಕ ನಂಬಿಕೆಗಳಲ್ಲಿ ವಿಶಿಷ್ಟವಾಗಿ ಹಾಸುಹೊಕ್ಕಾಗಿರುವ ಹೊನ್ನಂಬರಿಗೆ ಜನಪದ ಹಾಗೂ ಪುರಾಣಗಳಲ್ಲೂ ಮಹತ್ವದ ಸ್ಥಾನವಿದೆ.

ಬಯಲುಸೀಮೆಯಲ್ಲಿ ಕುರಿ, ಮೇಕೆ ಹಾಗೂ ದನಗಳಿಂದ ಬದುಕು ಕಟ್ಟಿಕೊಂಡ ಕುರಿಗಾಹಿ ಹಾಗೂ ದನಗಾಹಿಗಳು ಈ ಹೂವಿನ ಪಕಳೆಗಳನ್ನು ಒಣಗಿಸಿ ಅದರಿಂದ ಮಾಡಿದ ಚಹಾ ಸೇವಿಸುವುದು ಉಂಟು. ಊರ ಹೊರಗೆ ಹೆಚ್ಚಾಗಿ ಬೆಳೆಯುವ ಈ ಸಸ್ಯ ತನ್ನ ದೊಡ್ಡಸ್ತಿಕೆಯಿಂದ ಊರೊಳಗಿನ ಅಸ್ತಿತ್ವವನ್ನು ಬಿಟ್ಟುಕೊಟ್ಟಿಲ್ಲ. ಗಿಡಗಂಟಿ ಜಾತಿಗೆ ಸೇರುವ ಹೊನ್ನಂಬರಿ, ಪ್ರದೇಶದಿಂದ ಪ್ರದೇಶಕ್ಕೆ ವಿವಿಧ ಹೆಸರನ್ನು ಹೊಂದಿರುವಂತೆ, ಬಳಕೆಯಲ್ಲೂ ವಿಭಿನ್ನ ಸ್ಥಾನ ಪಡೆದುಕೊಂಡಿದೆ.

ಬಂಜಾರ ಸಮುದಾಯ ಈ ಹೂವಿನೊಂದಿಗೆ ಹೊಂದಿರುವ ನಂಟು ಮತ್ತೊಂದು ಬಗೆಯದು. ದೀಪಾವಳಿ ಲಂಬಾಣಿ ಸಮುದಾಯದವರ ಪಾಲಿಗೆ ಹೊಸವರ್ಷ. 'ಮೇರಾ' ಎಂದು ಕರೆಯಲಾಗುವ ಈ ಹಬ್ಬದ ಆಚರಣೆಯ ದಿನ ಪ್ರತಿಯೊಬ್ಬರೂ ನೆರೆಹೊರೆಯವರ ಮನೆಗಳಿಗೆ ತೆರಳಿ 'ಬಾಳು ಬಂಗಾರವಾಗಲಿ' ಎಂದು ಹೊನ್ನಂಬರಿಯ ಹೂಗಳ ಜೊತೆಗೆ ಇತರೆ ಹೂಗಳನ್ನು ನೀಡಿ ಹಾರೈಸುತ್ತಾರೆ. ಬಲಿಪಾಡ್ಯಮಿಯಂದು ಚಿಕ್ಕಮಕ್ಕಳು, ವಿಶೇಷವಾಗಿ ಯುವತಿಯರು ಕಸೂತಿಯಿಂದ ಕೂಡಿದ, ತಾವೇ ಸಿದ್ಧಪಡಿಸಿದ ರಂಗುರಂಗಿನ ಗಾಜಿನಿಂದ ತಯಾರಿಸಿದ ಉಡುಪುಗಳನ್ನು ಧರಿಸಿ, ಬಿದಿರಿನ ಬುಟ್ಟಿಗಳನ್ನು ತೆಗೆದುಕೊಂಡು ಹೊನ್ನಂಬರಿ ಹೂಗಳ ಜೊತೆಗೆ ವಲ್ಲಣದ ಹೂ, ಅಣ್ಣಿ ಹೂ ತರಲು ಗುಡ್ಡಗಾಡುಗಳಿಗೆ ತೆರಳುತ್ತಾರೆ. ಬುಟ್ಟಿ ತುಂಬಾ ಹೂಗಳನ್ನು ಸಂಗ್ರಹಿಸಿದ ನಂತರ ಹಿಂತಿರುಗುವಾಗ ದಾರಿಯುದ್ದಕ್ಕೂ ಹಾಡುಗಳನ್ನು